ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 135-141
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಶಾಲೆಬಿಟ್ಟ ಬುಡಕಟ್ಟು ಮಕ್ಕಳ ಸ್ಥಿತಿಗತಿಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ

**ಡಾ. ಶೇಷಪ್ಪ ಕೆ***

*ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಡಾ.ದಯಾನಂದ ಪೈ ಪಿ ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೇ ಕಾಲೇಜು, ಕಾರ್ ಸ್ಟ್ರೀಟ್, ಮಂಗಳೂರು.

***Abstract:***

*ಯಾವುದೇ ಒಂದು ರಾಷ್ಟ್ರ, ಜನಾಂಗ ಅಥವಾ ಸಮಾಜ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಆಚಾರ ವಿಚಾರ ಸಂಸ್ಕೃತಿಯನ್ನು ವರ್ಗಾಯಿಸುವಲ್ಲಿ ಶಿಕ್ಷಣವು ಪ್ರಮುಖವಾದ ಸಾಧನವಾಗಿದೆ. ಶಿಕ್ಷಣವು ಒಂದು ಸಾಮಾಜಿಕ ಸಂಸ್ಥೆಯಾಗಿದ್ದು, ವೈಜ್ಞಾನಿಕ ಚಿಂತನೆಗೆ ಒರೆ ಹಚ್ಚುವುದಲ್ಲದೆ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ, ಸಂಸ್ಕೃತಿಯ ಸಂರಕ್ಷಣೆಗೆ ಅತ್ಯವಶ್ಯಕವಾಗಿದೆ. ಹಾಗಾಗಿ ಶಿಕ್ಷಣ ಕೇವಲ ಜ್ಞಾನ ಸಂಪತ್ತಿನ ಕೇಂದ್ರವಾಗಿರದೆ ಮಕ್ಕಳಿಗೆ ಭವಿಷ್ಯವನ್ನು ಎದುರಿಸಲು ಅಗತ್ಯವಾದ ಕಲೆ ಮತ್ತು ನೈಪುಣ್ಯತೆಯನ್ನು ಉತ್ತಮೀಕರಿಸುವ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಆದರೆ ಬುಡಕಟ್ಟು ಸಮುದಾಯದ ಮಕ್ಕಳು ಇಂದಿಗೂ ಕೂಡ ಶಿಕ್ಷಣದಿಂದ ದೂರ ಉಳಿದಿದ್ದು, ಪಸ್ತುತ ಲೇಖನದಲ್ಲಿ ಶಾಲೆ ಬಿಟ್ಟಿರುವ ಬುಡಕಟ್ಟು ಮಕ್ಕಳ ಸ್ಥಿತಿಗತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಿಸಲಾಗಿದೆ.*

***Keywords:*** *ಬುಟಕಟ್ಟು ಶಿಕ್ಷಣ, ಬುಡಕಟ್ಟು ಸಮುದಾಯ, ಚಾಮರಾಜನಗರ, ಶಾಲೆಯಿಂದ ಹೊರಗುಳಿದಿರುವ ಮಕ್ಕಳು.*

## ಪೀಠಿಕೆ

ವ್ಯಕ್ತಿ ಅಥವ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣವು ಪ್ರಮುಕ ಪಾತ್ರವಹಿಸುತ್ತದೆ. ಶಿಕ್ಷಣವು ರಾಷ್ಟ್ರೀಯ ಅಭಿವೃದ್ಧಿಯ ಕೀಲಿಕೈಯಾಗಿದ್ದು, ವಿವಿಧ ಸಾಂವಿಧಾನಿಕ ನಿಬಂಧನೆಗಳು ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಹಾಗೂ 6–14 ವರ್ಷದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು ಎಂಬುದನ್ನು ಖಾತ್ರಿ ಪಡಿಸಿದೆ. ಸಂವಿಧಾನದ 93 ನೇ ತಿದ್ದುಪಡಿಯ ಪ್ರಕಾರ ಶಿಕ್ಷಣವು ಪ್ರತಿ ಮಗುವಿನ ಮೂಲಭೂತ ಹಕ್ಕಾಗಿದೆ, ಆದರೆ ಇನ್ನೂ ಲಕ್ಷಾಂತರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ವಿದ್ಯಾಭ್ಯಾಸದಲ್ಲಿ ಆಸಕ್ತಿಯ ಕೊರತೆ, ಪೋಷಕರ ಆರ್ಥಿಕ ಪರಿಸ್ಥಿತಿಗಳು, ಕುಟುಂಬದ ವಲಸೆ ಮತ್ತು ಮನೆಕೆಲಸದಲ್ಲಿ ಕುಟುಂಬಕ್ಕೆ ಸಹಾಯ ಮಾಡುವ ಪ್ರಮುಖ ಕಾರಣಗಳು ಶಾಲೆಯಿಂದ ಹೊರಗುಳಿಯಲು ಪ್ರಮುಖ ಕಾರಣಗಳಾಗಿವೆ. ಬೇರೆ ಸಮುದಾಯಗಳಿಗೆ ಹೋಲಿಸಿದಾಗ ಶಾಲೆಯಿಂದ ಹೊರಗುಳಿದವರಲ್ಲಿ ಬುಡಕಟ್ಟು ಮಕ್ಕಳ ಪ್ರಮಾಣ ಅಧಿಕವಾಗಿದೆ.

## ಬುಡಕಟ್ಟು ಸಮುದಾಯಗಳು

ಭಾರತದಲ್ಲಿ ಇಂತಹ 700 ಕ್ಕೂ ಹೆಚ್ಚು ಪರಿಶಿಷ್ಟ ಬುಡಕಟ್ಟು ಸಮುದಾಯಗಳನ್ನು ಕಾಣಬಹುದಾಗಿದೆ. ದೇಶದಲ್ಲಿರುವ ಒಟ್ಟು ಆದಿವಾಸಿ ಸಮುದಾಯಗಳಲ್ಲಿ 75 ಆದಿವಾಸಿ

***Please cite this article as***: ಶೇಷಪ್ಪ ಕೆ. (2022). ಶಾಲೆಬಿಟ್ಟ ಬುಡಕಟ್ಟು ಮಕ್ಕಳ ಸ್ಥಿತಿಗತಿಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(4), 135–141.

ಸಮುದಾಯಗಳನ್ನು "Particularly vulnarble Tribal Group" ಎಂದು ಗುರುತಿಸಲಾಗಿದೆ. ಇವರು ಇತರೆ ಆದಿವಾಸಿಗಳಿಗಿಂತಲೂ ಅತ್ಯಂತ ಹಿಂದುಳಿದಿದ್ದು ಕನಿಷ್ಟ ಜೀವನ ಸೌಕರ್ಯದಿಂದ ತೀವ್ರವಾಗಿ ವಂಚಿತವಾಗಿವೆಯಲ್ಲದೆ ಇವು ವಿನಾಶದ ಅಂಚಿನಲ್ಲವೆ ಎಂದು ಕೇಂದ್ರ ಸರ್ಕಾರ ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದೆ. ಭಾರತದಲ್ಲಿ 20011 ನೇ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ 8.6% ರಷ್ಟು ಕಂಡು ಬರುವ ಬುಡಕಟ್ಟು ಜನರು ನಾಗಲ್ಯಾಂಡ್, ಮೇಘಾಲಯ, ಅರುಣಾಚಲಪ್ರದೇಶ, ಮಿಜೋರಾಂ, ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಉತ್ತರಪ್ರದೇಶ, ಮಣಿಪುರ, ಲಕ್ಷದ್ವೀಪ ಮುಂತಾದ ಕಡೆ ಹೆಚ್ಚಾಗಿ ವಾಸಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 2011ನೇ ಜನಗಣತಿಯ ಪ್ರಕಾರ ಆದಿಯನ್, ಬಾರ್ದ, ಹಸಲರು, ಕೊಕ್ನ, ಕೋಳಿಡೋರ್, ಕೊಂಡಕಾಪು, ಕೋಯಾ, ರಾಜಕೋಯಾ, ಮಹಾಮಲಸರ್, ಸಿದ್ದಿ, ಸೋಲಿಗ, ಜೇನು ಕುರುಬ, ಬೆಟ್ಟಕುರುಬ, ಮೇದ, ಇರುಳಿಗ, ಗೊಂಡ, ವಾಲ್ಮಿಕಿ ನಾಯಕ, ಪಲ್ಲಿಯನ್, ಮಲೆಕುಡಿಯ, ಎರವ, ಕೊರಗ ಇನ್ನೂ ಮುಂತಾದ 50 ಆದಿವಾಸಿ ಸಮುದಾಯಗಳನ್ನು ಗುರುತಿಸಲಾಗಿದ್ದು, ಒಟ್ಟು ಜನಸಂಖ್ಯೆಯಲ್ಲಿ ಶೇ. 6.8% ರಷ್ಟು ಕಂಡುಬರುತ್ತಾರೆ. ಇದರಲ್ಲಿ ಕೊರಗ ಮತ್ತು ಜೇನು ಕುರುಬ ಸಮುದಾಯಗಳನ್ನು "Particularly vulnarble Tribal Group" ಎಂಬುದಾಗಿ ಗುರುತಿಸಲಾಗಿದೆ. ಇತರ ಸಮುದಾಯದವರಿಗೆ ಹೋಲಿಸಿದಾಗ ಬುಡಕಟ್ಟು ಜನರು ಸಾಮಾಜಿಕವಾಗಿ, ಸಾಂಸ್ಕೃವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಇತರರಿಗಿಂತ ಭಿನ್ನರಾಗಿದ್ದು ಅತ್ಯಂತ ಹಿಂದುಳಿದವರಾಗಿದ್ದಾರೆ.

ಆದ್ದರಿಂದ ಶಾಲೆಯಿಂದ ಹೊರಗುಳಿದಿರುವ ಬುಡಕಟ್ಟು ಮಕ್ಕಳ ಸ್ಥಿತಗತಿಯನ್ನು ತಿಳಿದುಕೊಳ್ಳುವ ಸಲುವಾಗಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ವಾಸಿಸುತ್ತಿರುವ ಸೋಲಿಗ, ಜೇನುಕುರುಬ ಮತ್ತು ಬೆಟ್ಟಕುರುಬ ಬುಡಕಟ್ಟು ಸಮುದಾಯದ ಮಕ್ಕಳನ್ನು ಅಧ್ಯಯನ ಕೈಗೊಳ್ಳಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಮತ್ತು ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ಸಿಗಬೇಕೆಂಬ ಬಯಕೆಯಿಂದ ಪಠ್ಯ ಪುಸ್ತಕಗಳ ವಿತರಣೆ, ವಿದ್ಯಾರ್ಥಿ ವೇತನ ವಿವಿಧ ರೀತಿಯ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಅಲ್ಲದೆ ಶಾಲೆಯಿಂದ ಹೊರಗುಳಿದ ಮತ್ತು ನಿಯಮಿತವಾಗಿ ಶಾಲೆಗೆ ಹಾಜರಾಗದ ಮಕ್ಕಳನ್ನು ಶಾಲೆಗೆ ಕರೆತರುವ ಉದ್ದೇಶದಿಂದ ವಿವಿಧ ಉಪಕ್ರಮಗಳನ್ನು/ಯೋಜನೆಗಳನ್ನು ಜಾರಿಗೊಳಿಸಿದೆ. ಆದರೂ ಸಹಾ ಮಕ್ಕಳ ಶಿಕ್ಷಣ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗದೇ ಕೆಳ ವರ್ಗದ ಸಮುದಾಯದಲ್ಲಿ ಅದರಲ್ಲೂ ಬುಡಕಟ್ಟು ಸಮುದಾಯದ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಅಘಾತಕಾರಿ ವಿಷಯವಾಗಿದೆ. (ಕರ್ನಾಟಕ ಮಾನವ ಅಭಿವೃದ್ಧಿ ವರದಿ –2005)

ಬುಡಕಟ್ಟು ಸಮುದಾಯಗಳು ಸಾಂಸ್ಕೃತಿಕವಾಗಿ ಇತರ ಸಮುದಾಯಗಳಗಿಂತ ಭಿನ್ನರಾಗಿದ್ದು, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ. ಸಾಮಾನ್ಯ ಸಮುದಾಯಗಳಿಗೆ ಹೋಲಿಸಿದಾಗ ಬುಡಕಟ್ಟು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಕಡಿಮೆಯಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬುಡಕಟ್ಟು ಸಮುದಾಯದ ಮಕ್ಕಳ ದಾಖಲಾತಿಯಲ್ಲಿ ಬದಲಾವಣೆಗಳಾದರೂ ಶಾಲೆಯಿಂದ ಹೊರಗುಳಿಯುವ ಬುಡಕಟ್ಟು ಮಕ್ಕಳ ಪ್ರಮಾಣ ಹೆಚ್ಚಿದೆ. ಅದರಲ್ಲೂ ಹೆಣ್ಣು ಮಕ್ಕಳ ಗೈರು ಹಾಜರಿ ಹಾಗೂ ಶಾಲೆ ಬಿಡುವ ಪ್ರಮಾಣ ಅಧಿಕವಾಗಿದೆ. (ವೀರಭದ್ರ ನಾಯ್ಕ–2010)

**ಅಧ್ಯಯನ ಕ್ಷೇತ್ರ:**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ತಾಲೂಕಿನ ಬಂಡೀಪುರ ಅಭಯ ಅರಣ್ಯ ಮತ್ತು ಗೋಪಾಲಸ್ವಾಮಿ ಬೆಟ್ಟದ ಸುತ್ತಮುತ್ತಲಿರುವ ಮೇಲುಕಾಮನಹಳ್ಳಿ ಕಾಲೋನಿ, ಕಾರೇಮಾಳ, ಅನಂಜಿಹುಂಡಿ, ಮದ್ದೂರು ಕಾಲೋನಿ, ನವಿಲುಗುಂದಿ, ಮಗುವಿನಹಳ್ಳಿ ಕಾಲೋನಿ, ಮುಕ್ತಿ ಕಾಲೋನಿ, ಹಗ್ಗದ ಹಳ್ಳ, ಗುಡ್ಡಕೇರಿ, ಮುಂತಾದ ಹಾಡಿ/ಕಾಲೋನಿಗಳಲ್ಲಿ ವಾಸ ಮಾಡುತ್ತಿದ್ದಾರೆ.

**ಅಧ್ಯಯನದ ಗುರಿ ಮತ್ತು ಉದ್ದೇಶಗಳು**

- ಬುಡಕಟ್ಟು ಮಕ್ಕಳು ಯಾವ ಹಂತದಲ್ಲಿ ಮತ್ತು ಯಾವ ವಯಸ್ಸಿನಲ್ಲಿ ಶಾಲೆ ತೊರೆಯುತ್ತಿದಾರೆ ಎಂಬುದನ್ನು ತಿಳಿದು ಕೊಳ್ಳುವುದು.
- ಬುಡಕಟ್ಟು ಮಕ್ಕಳು ಮದ್ಯಂತರದಲ್ಲಿ ಶಾಲೆ ಬಿಡಲು ಅಥವಾ ಶಾಲೆಯಿಂದ ಹೊರಗಿರಲು ಕಾರಣಗಳನ್ನು ಅಧ್ಯಯನ ಮಾಡುವುದು.
- ಬುಡಕಟ್ಟು ಮಕ್ಕಳ ಶೈಕ್ಷಣಿಕಾಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಹಾಗೂ ಪ್ರಾಥಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ನಿಯತಕಾಲಿಕೆಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ವರದಿಗಳು, ಸಂಶೋಧನಾ ಪ್ರಬಂಧಗಳು, ಲೇಖನಗಳು ಹಾಗೂ ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸರಳಯಾದೃಚ್ಚಿಕ ಮಾದರಿಯಲ್ಲಿ ಶಾಲೆಯಿಂದ ಹೊರಗುಳಿದಿರುವ 50 ಬುಡಕಟ್ಟು ಮಕ್ಕಳು (6–18 ವರ್ಷ), ಪೋಷಕರು, ಹಾಗೂ ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಕೋಷ್ಟಕ 01: ಲಿಂಗವಾರು ಶಾಲೆ ಬಿಟ್ಟ ಬುಡಕಟ್ಟು ಮಕ್ಕಳ ವಿವರ**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಗಂಡು | 23 | 46.0 |
| ಹೆಣ್ಣು | 27 | 54.0 |
| **ಒಟ್ಟು** | **50** | **100.0** |

ಮಾಹಿತಿ: ಕ್ಷೇತ್ರ ಕಾರ್ಯ

ಅಧ್ಯಯನಕ್ಕೆ ಒಳಪಡಿಸಿರುವ 50 ಮಕ್ಕಳಲ್ಲಿ ಗಂಡು ಮಕ್ಕಳಗಿಂತ (46.0%) ಹೆಣ್ಣು ಮಕ್ಕಳ ಪ್ರಮಾಣ (54.0%) ಅಧಿಕವಾಗಿರುವುದು ಅಧ್ಯಯನದಿಂದ ಕಂಡು ಬಂದಿದ್ದು ಇದೇ ಅಂಶನ್ನು ಮಂಜುನಾಥ (2014) ರವರು ಸಹಾ ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ.

**ಕೋಷ್ಟಕ 02: ತರಗತಿವಾರು ಶಾಲೆ ಬಿಟ್ಟ ಮಕ್ಕಳ ಪ್ರಮಾಣ**

| ಶಾಲೆ ಬಿಟ್ಟ ತರಗತಿಗಳು | ಆವೃತ್ತಿ | ಶೇಕಡವಾರು |
|---|---|---|
| ಕಿರಿಯ ಪ್ರಾಥಮಿಕ | 24 | 48.0 |
| ಹಿರಿಯ ಪ್ರಾಥಮಿಕ | 16 | 32.0 |
| ಪ್ರೌಢ ಶಾಲೆ | 7 | 14.0 |
| ಪಿ.ಯು.ಸಿ. | 3 | 6.0 |
| **ಒಟ್ಟು** | **50** | **100.00** |

ಮಾಹಿತಿ: ಕ್ಷೇತ್ರ ಕಾರ್ಯ

ತರಗತಿವಾರು ಶಾಲೆ ಬಿಟ್ಟಿರುವ ಮಕ್ಕಳ ಪ್ರಮಾಣವನ್ನು ಗಮಿನಿಸಿದಾಗ ಅತ್ಯಂತ ಹೆಚ್ಚು ಮಕ್ಕಳು 48.0%) ಕಿರಿಯ ಪ್ರಾಥಮಿಕ ಶಾಲೆಯ ಹಂತದಲ್ಲೆ ಶಾಲೆ ಬಿಟ್ಟಿರುವುದು ಕಂಡು ಬಂದಿದೆ. ಆದರೆ ಕರ್ನಾಟಕ ರಾಜ್ಯ ಮಾನವ ಅಭಿವೃದ್ಧಿ ವರದಿಯಲ್ಲಿ (2005) ಬುಡಕಟ್ಟು ಮಕ್ಕಳು ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ಶಾಲೆ ತೊರೆಯುವುದೆ ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಹೇಳಿದೆ.

**ಕೋಷ್ಟಕ 03: ಶಾಲೆ ಬಿಟ್ಟ ಮಕ್ಕಳ ಕುಟುಂಬದ ಆದಾಯ**

| ಶಾಲೆ ಬಿಟ್ಟ ತರಗತಿಗಳು | ಆವೃತ್ತಿ | ಶೇಕಡವಾರು |
|---|---|---|
| 10,000 ಕ್ಕಿಂತ ಕಡಿಮೆ | 24 | 48.0 |
| 11,000–20,000 | 13 | 26.0 |
| 21,000–30,000 | 10 | 20.0 |
| 30,000 ಕ್ಕಿಂತ ಹೆಚ್ಚು | 3 | 6.0 |
| **ಒಟ್ಟು** | **50** | **100.00** |

ಮಾಹಿತಿ: ಕ್ಷೇತ್ರ ಕಾರ್ಯ

ಆದಾಯವಾರು ಶಾಲೆ ಬಿಟ್ಟಿರುವ ಮಕ್ಕಳ ವಿವರವನ್ನು ಗಮಿನಿಸಿದಾಗ ಅತ್ಯಂತ ಕಡಿಮೆ ಆದಾಯವಿರುವ (10,000 ಕ್ಕಿಂತ ಕಡಿಮೆ) ಕುಟುಂಬಗಳಲ್ಲಿ ಅತಿ ಹೆಚ್ಚು (48.0%) ಶಾಲೆ ತೊರೆದಿರುವುದು ಕಂಡು ಬಂದಿದ್ದು, 11 ಸಾವಿರ ದಿಂದ 20 ಸಾವಿರದವರೆಗಿನ ಆದಾಯವಿರುವ ಕುಟುಂಬಗಳಲ್ಲಿ 26.0%, 21 ಸಾವಿರದಿಂದ 30 ಸಾವಿರದ ವರೆಗಿನ ಆದಾಯವಿರುವ ಕುಟುಂಬದಲ್ಲಿ 20% ಹಾಗೂ 30 ಸಾವಿರಕ್ಕಿಂತ ಹೆಚ್ಚು ಆದಾಯವಿರುವ ಕುಟುಂಬಗಳಲ್ಲಿ 6% ರಷ್ಟು ಮಕ್ಕಳು ಶಾಲೆಯಿಂದ ಹೊರಗಿರುವುದು ದೃಢಪಟ್ಟಿದೆ ಹಾಗೂ ಇದೇ ಅಂಶವನ್ನು ಮಂಜುನಾಥ್ (2012) ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ.

**ಕೋಷ್ಟಕ 04: ಶಾಲೆ ಬಿಟ್ಟ ಮಕ್ಕಳ ಪೋಷಕರ ವೃತ್ತಿ**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಕೂಲಿ | 28 | 56.0 |
| ವ್ಯವಸಾಯ | 12 | 24.0 |
| ಕಿರುಉತ್ಪನ್ನ | 6 | 12.0 |
| ಸರ್ಕಾರಿ | – | – |
| ಇತರೆ | 4 | 8.0 |
| **ಒಟ್ಟು** | | **100.00** |

ಮಾಹಿತಿ: ಕ್ಷೇತ್ರ ಕಾರ್ಯ

ಪೋಷಕರ ವೃತ್ತಿ ಮಕ್ಕಳ ಶಿಕ್ಷಣವನ್ನು ನಿರ್ಧರಿಸುತ್ತದೆ. (ಮನ್ಮಥ ಕುಂದು–2003) ಮೂಲತಃ ಕಡು ಬುಡಕಟ್ಟು ಜನರು ಕಡುಬಡವರಾಗಿದ್ದು ಜೀವನೋಪಾಯಕ್ಕಾಗಿ ಕೂಲಿ ಮತ್ತು ಅರಣ್ಯದಲ್ಲಿ ದೊರೆಯುವ ಪಾಚಿ, ನೆಲ್ಲಿ, ಗೆಡ್ಡೆ ಗೆಣಸು, ಸೌದೆ, ಜೇನು ಮುಂತಾದ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ಸಾಗಿಸುತ್ತಿದ್ದೂ, ಕೆಲವರು ಅರಣ್ಯ ಇಲಾಖೆಯಲ್ಲಿ ಕಾವಾಡಿ ಮತ್ತು ಮಾವುತರಾಗಿ ದುಡಿಯುತ್ತಿದ್ದಾರೆ. ಶಾಲೆ ಬಿಟ್ಟಿರುವ ಒಟ್ಟು ಮಕ್ಕಳಲ್ಲಿ ಅತ್ಯಂತ ಹೆಚ್ಚು ಮಕ್ಕಳ (56.0%) ಪೋಷಕರ ಆದಾಯ ಕೂಲಿಯಾಗಿದ್ದು, 24.0% ಮತ್ತು 12.0% ರಷ್ಟು ಮಕ್ಕಳ ಪೋಷಕರ ಉದ್ಯೋಗ ಕ್ರಮವಾಗಿ ವ್ಯವಸಾಯ ಮತ್ತು ಕಿರುಉತ್ಪನ್ನ ದುಡಿಯುತ್ತಿದ್ದಾರೆ.

**ಕೋಷ್ಟಕ: 05 ಶಾಲೆ ಬಿಟ್ಟ ಮಕ್ಕಳ ಪೋಷಕರ ಶೈಕ್ಷಣಿಕ ಮಟ್ಟ**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಅನಕ್ಷರಸ್ಥ | 32 | 64.0 |
| ಕಿರಿಯ ಪ್ರಾಥಮಿಕ | 7 | 14.0 |
| ಹಿರಿಯ ಪ್ರಾಥಮಿಕ | 4 | 8.0 |
| ಪ್ರೌಡ ಶಿಕ್ಷಣ | 3 | 6.0 |
| ಪಿ.ಯು.ಸಿ/ಮೇಲ್ಪಟು | 4 | 8.0 |
| **ಒಟ್ಟು** | **50** | **100.00** |

ಮಾಹಿತಿ: ಕ್ಷೇತ್ರ ಕಾರ್ಯ

ಪೋಷಕರ ಶಿಕ್ಷಣಕ್ಕನುಗುಣವಾಗಿ ಮದ್ಯಂತರದಲ್ಲಿ ಶಾಲೆ ಬಿಟ್ಟಿರುವ ಮಕ್ಕಳ ಪ್ರಮಾಣವನ್ನು ಗಮನಿಸಿದಾಗ ಅನಕ್ಷರಸ್ಥ ಪೋಷಕರ ಕುಟುಂಬದಲ್ಲಿ ಅತಿ ಹೆಚ್ಚು ಅಂದರೆ 64.0% ಮಕ್ಕಳು ಶಾಲೆ ಬಿಟ್ಟಿದ್ದು, ಪೋಷಕರ ಶಿಕ್ಷಣಕ್ಕೂ ಮತ್ತು ಮಕ್ಕಳ ಶಿಕ್ಷಣಕ್ಕೂ ಸಂಬಂಧವಿರುವುದು ಸಂಶೋಧನೆಯಲ್ಲಿ ಕಂಡು ಬಂದಿದೆ. ಪೋಷಕರ ಶೈಕ್ಷಣಿಕ ಮಟ್ಟ ಕಡಿಮೆಯಿರುವ ಕುಟುಂಬಗಳಲ್ಲಿ ಹೆಚ್ಚು ಮಕ್ಕಳು

ಶಾಲೆಯಿಂದ ಹೊರಗುಳಿದಿದ್ದಾರೆ. ಪೋಷಕರ ಶೈಕ್ಷಣಿಕ ಮಟ್ಟ ಉತ್ತಮವಾಗಿರುವ ಕಡೆ ಶಾಲೆ ಬಿಟ್ಟ ಮಕ್ಕಳ ಪ್ರಮಾಣ ಕಡಿಮೆಯಿರುವುದು ಅಧ್ಯಯನದಿಂದ ದೃಢಪಟ್ಟಿದೆ.

**ಕೋಷ್ಟಕ 06: ಬುಡಕಟ್ಟು ಮಕ್ಕಳು ಮಧ್ಯಂತರದಲ್ಲಿ ಶಾಲೆ ಬಿಡಲು ಕಾರಣಗಳು**

| ವಿವರ | ಆವೃತ್ತಿ | ಶೇಕಡವಾರು |
|---|---|---|
| ಬಡತನ | 10 | 20.0 |
| ಪೋಷಕರ ಅನಕ್ಷರತೆ ಮತ್ತು ನಿರಾಸಕ್ತಿ | 6 | 12.0 |
| ಮಕ್ಕಳಲ್ಲಿ ನಿರಾಸಕ್ತಿ | 9 | 18.0 |
| ಆರ್ಥಿಕ ಚುವಟಿಕೆ | 9 | 18.0 |
| ಕಲಿಕಾ ಸಮಸ್ಯೆಗಳು | 11 | 22.0 |
| ಇತರೆ | 5 | 10.0 |
| **ಒಟ್ಟು** | **50** | **100.00** |

**ಮಾಹಿತಿ: ಕ್ಷೇತ್ರ ಕಾರ್ಯ**

ಬುಡಕಟ್ಟು ಪ್ರದೇಶಗಳಲ್ಲಿ ಶಾಲೆಗೆ ದಾಖಲಾದ ಎಲ್ಲಾ ಮಕ್ಕಳು ಶಿಕ್ಷಣವನ್ನು ಪೂರ್ಣಗೊಳಿಸುವುದಿಲ್ಲ. ಅದರಲ್ಲೂ ಬಹುತೇಕ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಮುನ್ನವೇ ಶಾಲೆಯನ್ನು ತೊರೆಯುತ್ತಿರುವುದು ಸಾಮಾನ್ಯವಾಗಿದೆ. ಇದಕ್ಕೆ ವಿವಿಧ ಅಂಶಗಳು ಕಾರಣವಾಗಿದ್ದು, ಹೆಚ್ಚು ಮಕ್ಕಳು ಬಡತನ (20.0%), ಪೋಷಕರ ಅನಕ್ಷರತೆ ಮತ್ತು ನಿರಾಸಕ್ತಿಯಿಂದ 12.0% ರಷ್ಟು ಮಕ್ಕಳು, ಕಲಿಕಾ ಸಮಸ್ಯೆಯಿಂದ 22.0% ರಷ್ಟು ಮಕ್ಕಳು, ಶೇ.18.0 ರಷ್ಟು ಮಕ್ಕಳ ನಿರಾಸಕ್ತಿ, 18.0% ಆರ್ಥಿಕ ಚಟುವಟಿಕೆಯ ಕಾರಣದಿಂದ ಹಾಗೂ ಇತರೆ ಸಮಸ್ಯೆಯಿಂದ 10.0% ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.

**ಸಾರಾಂಶ**

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಗುಂಡ್ಲುಪೇಟೆ ತಾಲೂಕಿನಲ್ಲಿ ಬುಡಕಟ್ಟು ಜನರ ಸಾಕ್ಷರತೆ ಕಡಿಮೆಯಿದ್ದು, ಶಾಲೆ ಬಿಡುವ ಪ್ರಮಾಣ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಲ್ಲಿ ಅಧಿಕವಾಗಿದ್ದು, ಅತ್ಯಂತ ಹೆಚ್ಚಿನ ಮಕ್ಕಳು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ತೊರೆಯುತ್ತಿದ್ದಾರೆ. ಇವರು ವಾಸಿಸುವ ಬಹುತೇಕ ಕಾಲೋನಿಗಳಿಗೆ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಶಾಲೆಗೆ ಹೋಗಬೇಕೆಂದರೆ ನಡೆದುಕೊಂಡು ಹೋಗಬೇಕು. ಈ ಸಂದರ್ಭದಲ್ಲಿ ಕಾಡು ಪ್ರಾಣಿಗಳ ಭಯದಿಂದ ಮಕ್ಕಳು ಸಹಾ ಶಾಲೆಗೆ ಹೋಗಲು ಹೆದರುತ್ತಾರೆ. ಅಲ್ಲದೆ ಸಹಪಾಠಿ ಅಥವಾ ಸೋದರ/ಸೋದರಿಯರು ಶಾಲೆ ಬಿಟ್ಟರೆ ಇತರೆ ಮಕ್ಕಳು ಸಹಾ ಶಾಲೆ ಬಿಡುವ ಪರಿಪಾಠವಿದ್ದು, ಪೋಷಕರ ಅನಕ್ಷರತೆ ಮತ್ತು ನಿರಾಸಕ್ತಿಯಿಂದಲೂ ಸಹಾ ಮಕ್ಕಳು ಶಾಲೆಯನ್ನು ತೊರೆಯುತ್ತಿದ್ದಾರೆ. ಮೂಲತಃ ಬಡತನದಿಂದ ಜೀವನ ಸಾಗಿಸುತ್ತಿರುವ ಇವರಿಗೆ ಸ್ಥಳೀಯವಾಗಿ ಕೂಲಿಸಿಗದ ಸಂದರ್ಭದಲ್ಲಿ ನೆರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿಗೆ ಮಕ್ಕಳ ಸಹಿತ ವಲಸೆ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಮಕ್ಕಳು 2 ರಿಂದ 4 ತಿಂಗಳು ಶಾಲೆಗೆ ಗೈರು ಹಾಜರಾಗುವುದರಿಂದ ಮಕ್ಕಳಲ್ಲಿ ಕಲಿಕಾ ಸಮಸ್ಯೆ ಉಂಟಾಗಿ ತದನಂತರದಲ್ಲಿ ಶಾಲೆ ಬಿಡುತ್ತಾರೆ. ಶಾಲೆಯಲ್ಲಿ ಬೋಧಿಸುವ ಭಾಷಾ

ಮಾಧ್ಯಮಕ್ಕಿಂತ ವಿಭಿನ್ನವಾಗಿದೆ, ಪ್ರಸ್ತುತವಿರುವ ಪಠ್ಯಕ್ರಮವು ಸಹಾ ಬುಡಕಟ್ಟು ಸಮಾಜ, ಸಂಸ್ಕೃತಿ, ಆಚಾರ ವಿಚಾರಗಳಿಗೆ ಅನುಗುಣವಾಗಿರುವುದಿಲ್ಲ. ಈ ಎಲ್ಲಾ ಅಂಶಗಳು ಬುಡಕಟ್ಟು ಮಕ್ಕಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತಿದೆ. **ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಲಹೆಗಳು**

ಬುಡಕಟ್ಟು ಮಕ್ಕಳು ಮದ್ಯಂತರದಲ್ಲಿ ಶಾಲೆ ಬಿಡುವುದನ್ನು ತಡೆಗಟ್ಟಲು ಮತ್ತು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರೆಯುವಂತೆ ಮಾಡಲು ಅಧ್ಯಯನದ ಫಲಿತಾಂಶಗಳನ್ನು ಆದರಿಸಿ ಕೆಲವು ಸಲಹೆಗಳನ್ನು ನೀಡಬಹುದಾಗಿದೆ. ಬುಡಕಟ್ಟು ಜನರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸದೃಢಗೊಳಿಸುವುದರ ಜೊತೆಗೆ ವಲಸೆ ಹೋಗುವುದನ್ನು ತಪ್ಪಿಸುವುದು ಅನಿವಾರ್ಯವಾಗಿದೆ. ಪೋಷಕರಿಗೆ ಶಿಕ್ಷಣದ ಅರಿವು ಮತ್ತು ಮಹತ್ವವನ್ನು ತಿಳಿಸಿ ಕೂಡಬೇಕು. ಅಲ್ಲದೇ ಕಿರಿಯ ಪ್ರಾಥಮಿಕ ಶಾಲೆಗಳನ್ನು ಕೊನೆ ಪಕ್ಷ ಹಿರಿಯ ಪ್ರಾಥಮಿಕ ಶಾಲೆಯವರೆಗೆ ವಿಸ್ತರಿಸುವುದು. ಹಾಗೂ ಬುಡಕಟ್ಟು ಪ್ರದೇಶಗಳಿಗೆ ಹತ್ತಿರವಾಗುವಂತೆ ಪ್ರೌಢಶಾಲೆಗಳನ್ನು ತೆರೆಯುವುದು ಮತ್ತು ಆಶ್ರಮಶಾಲೆ ಮತ್ತು ವಸತಿ ಶಾಲೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳುವುದು ಅಲ್ಲದೆ ಬುಡಕಟ್ಟು ಸಮಾಜದ ಸಂಸ್ಕೃತಿಗೆ ಅನುಗುಣವಾಗಿ ಮೌಖಿಕ ಸಾಹಿತ್ಯ, ಕಥೆಗಳು, ನೈತಿಕ ಮೌಲ್ಯ, ಪರಿಸರ ಮತ್ತು ಶಿಕ್ಷಣದ ಮಹತ್ವವನ್ನು ತಿಳಿಸುವಂತಹ ಪಠ್ಯಕ್ರಮಗಳನ್ನು ಜಾರಿಗೊಳಿಸುವುದು ಅಗತ್ಯವಾಗಿದೆ.

ಜೊತೆಗೆ ಬುಡಕಟ್ಟು ಭಾಷೆಯ ಬಗ್ಗೆ ಜ್ಞಾನವಿರುವ ಶಿಕ್ಷಕರನ್ನು ನೇಮಿಸುವುದು ಅತ್ಯವಶ್ಯಕವಾಗಿದೆ. ಬುಡಕಟ್ಟು ಹಾಡಿಯಲ್ಲಿರುವ ವಿದ್ಯಾವಂತರನ್ನು ಗುರುತಿಸಿ, ತರಬೇತಿ ನೀಡಿ ಉದ್ಯೋಗವಕಾಶ ಕಲ್ಪಿಸಿ ಅವರ ಜೀವನವನ್ನು ಉತ್ತಮೀಕರಿಸಬೇಕು. ಅಲ್ಲದೇ ನಿಯಮಿತವಾಗಿ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ನೀಡುವುದು ಮತ್ತು ಪೋಷಕರಿಗೆ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಹೆಚ್ಚಿಸುವುದು ಹಾಗೂ ಮಕ್ಕಳ ಆರೋಗ್ಯ ಸ್ಥಿತಿಗತಿಯನ್ನು ಉತ್ತಮಪಡಿಸುವುದು ಮತ್ತು ಶಾಲೆಗಳಲ್ಲಿ ಉತ್ತಮ ಕಲಿಕಾ ವಾತಾವರಣ ನಿರ್ಮಿಸುವುದು ಅವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ವೀರಭದ್ರ ನಾಯ್ಕ. (2010). *ಶಾಲಾ ವಂಚಿತ ಬುಡಕಟ್ಟು ಮಕ್ಕಳು.* ಪ್ರಸಾರಾಂಗ, ಕನ್ನಡ ವಿ.ವಿ.
- ಮಂಜುನಾಥ್ ಬಿ.ಆರ್. (2010). ಚಾಮರಾಜನಗರ ಜಿಲ್ಲೆಯ ಆದಿವಾಸಿಗಳು: ಒಂದು ಪಕ್ಷಿನೋಟ. ಸಂ– ಮಧು ಗುಂಡ್ಲುಪೇಟೆ. ಅಕ್ಷತ ಪ್ರಕಾಶನ.
- Bhuriya Manipal. (2010). *Tribal Education in India*. Website Article.
- Deshmukh B.A. (2004). *Tribal Education.* Sonali Publication.
- Mamatha Kundu. (2003). *Tribal Education.* Gyan Publication.
- Manjunatha.B.R. and Annapurna M. (2012). An Investigative Study on School dropouts in Tribal Setting: A case of three selected Tribes in South Karnataka. *Antrocom online Journal of Anthropology.* . 8.(2)